**ದಿಃ 28.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಶ್ರೀ. ಎಂ.ಬಿ.ಎನ್ ವಕೀಲರಿಂದಃ ಅರ್ಜಿದಾರರ ಪರವಾಗಿಃ**

**13)** ಡಿಸಚಾರ್ಜ ಸಮ್ಮರಿಯ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-**7** ಎಂದು ಗುರುತಿಸಲಾಯಿತು. ಅಂಗನ್ಯೂನತಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-**8** ಎಂದು ಗುರುತಿಸಲಾಯಿತು. ಒಂದು ಎಕ್ಸರೇ ಪಿಲಂವುಳ್ಳ ಕವರನ್ನು ಹಾಜರುಪಡಿಸಿದ್ದು, ಅದನ್ನು **2** ನೇ ಎದುರುದಾರರ ಪರ ವಕೀಲರ ತಕರಾರಿಗೆ ಒಳಪಡಿಸಿ ನಿ.ಪಿ-**9** ಎಂದು ಗುರುತಿಸಲಾಯಿತು. **6** ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿ.ಪಿ-**10** ಎಂದು ಗುರುತಿಸಲಾಯಿತು. ಅರ್ಜಿದಾರರ ಆಧಾರಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-**11** ಎಂದು ಗುರುತಿಸಲಾಯಿತು. ಅರ್ಜಿದಾರರ ಬ್ಯಾಂಕಪಾಸಪುಸ್ತಕದ ಅಟೆಸ್ಟೆಡ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-**12** ಎಂದು ಗುರುತಿಸಲಾಯಿತು. ಅರ್ಜಿದಾರರ ಪ್ಯಾನಕಾರ್ಡಿನ ಅಟೆಸ್ಟೆಡ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-**13** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ವಿ.ಎಸ್.ಎ ವಕೀಲರಿಂದಃ 2 ನೇ ಎದುರುದಾರರ ಪರವಾಗಿಃ**

**14)** ನನಗೆ ಅಪಘಾತವಾದಾಗ 50 ವರ್ಷ ವಯಸ್ಸಾಗಿತ್ತು ಅಂದರೆ ಸರಿಯಲ್ಲ, ಆದರೆ 47 ವರ್ಷ ವಯಸ್ಸಾಗಿತ್ತು. ನಾನು ಟೇಲರಿಂಗ ಕೆಲಸ ಮಾಡಿ ಅಪಘಾತವಾಗುವ ಪೂರ್ವದಲ್ಲಿ ತಿಂಗಳಿಗೆ ರೂ.20,000/- ಗಳಿಸುತ್ತಿದ್ದೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ಅಪಘಾತವಾದ ದಿವಸ ನನ್ನ ಗಂಡನು

ನಾನು ಹಿಂಬದಿ ಸವಾರಳಾಗಿ ಹೊರಟಿದ್ದ ಮೋಟಾರ ಸೈಕಲನ್ನು ಆತನೇ ನಡೆಸುತ್ತಿದ್ದ ಅಂದರೆ ಸರಿ. ಅಪಘಾತವಾದ ದಿವಸ ನನ್ನ ಗಂಡ ಇಬ್ಬರೂ ವ್ಯಕ್ತಿಗಳನ್ನು ಕೂರಿಸಿಕೊಂಡು ಒಟ್ಟು ನಾವು ಮೂರು ಜನ ಸೇರಿ ನಾವು ಒಂದೇ ಮೋಟಾರ ಸೈಕಲ್ ಮೇಲೆ ಹೊರಟಿದ್ದೇವು ಅಂದರೆ ಸರಿ. ನನ್ನ ಗಂಡ ಚಾಲನೆ ಮಾಡುತ್ತಿದ್ದ ಮೋಟಾರ ಸೈಕಲ್ ಮೇಲೆ ನಾನು ಮತ್ತು ನನ್ನ ಮೂರು ವರ್ಷದ ಮೊಮ್ಮಗ ಇಬ್ಬರೂ ಹಿಂಬದಿ ಸವಾರರಾಗಿ ಬರುತ್ತಿದ್ದೇವು. ನನ್ನ ಮೂರು ವರ್ಷದ ಮೊಮ್ಮಗ ನನ್ನ ಮತ್ತು ನನ್ನ ಗಂಡನ ಮಧ್ಯದಲ್ಲಿ ಕುಳಿತುಕೊಂಡಿದ್ದನು. ಅಪಘಾತವಾದ ಸಮಯದಲ್ಲಿ ನನ್ನ ಗಂಡನಿಗೆ ಮೋಟಾರ ಸೈಕಲ್ ಚಾಲನಾ ಪರವಾನಿಗೆ ಪತ್ರ ಚಾಲನೆಯಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ನನ್ನ ಗಂಡನ ಚಾಲನಾ ಪರವಾನಿಗೆ ಪತ್ರದ ಪ್ರತಿಯನ್ನು ಹಾಜರುಪಡಿಸಿರುವದಿಲ್ಲ. ಅಪಘಾತವಾದ ಸಮಯದಲ್ಲಿ ನನ್ನ ಗಂಡನಿಗೆ ಮೋಟಾರ ಸೈಕಲ್ ನಡೆಸಲು ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಅಂದರೆ ಸರಿಯಲ್ಲ. ನನ್ನ ಗಂಡ ಚಾಲನೆ ಮಾಡಿಕೊಂಡು ಹೊರಟಂತಹ ಮೋಟಾರ ಸೈಕಲನ ಎದುರುಗಡೆಯಿಂದ ಇನ್ನೊಂದು ಮೋಟಾರ ಸೈಕಲ್ ನೊಂದಣಿ ಸಂಖ್ಯೆ ಕೆಎ-27/ಇಆರ್-8503 ಈ ಮೋಟಾರ ಸೈಕಲ ಚಾಲಕನು ತನ್ನ ಮೋಟಾರ ಸೈಕಲನ್ನು ಅತೀ ವೇಗದಿಂದ ಚಾಲನೆ ಮಾಡಿಕೊಂಡು ಬಂದು ಎದುರುಬದಿಯಿಂದ ನನ್ನ ಗಂಡ ಚಾಲನೆ ಮಾಡುತ್ತಿದ್ದ ಮೋಟಾರ ಸೈಕಲಗೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾನೆ.

15) ಈ ಪ್ರಕರಣದಲ್ಲಿ ಹೇಳಿದಂತಹ ಅಪಘಾತವು ರಸ್ತೆಯ ಮಧ್ಯ ಭಾಗದಲ್ಲಿ ಆಗಿರುತ್ತದೆ ಅಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂದಪಟ್ಟಂತೆ ನನ್ನ ಮಗನಾದ ವೀರಯ್ಯ ಹಿರೇಮಠ ಈತನು ಪಿರ್ಯಾದಿಯನ್ನು ಅಪಘಾತವಾದ 2 ದಿನದ ಬಳಿಕ ಕೊಟ್ಟಿರುತ್ತಾನೆ. ನನ್ನ ಗಂಡನಿಗೆ ವಯಸ್ಸಾಗಿದ್ದರಿಂದ ನನ್ನ ಗಂಡನಿಗೆ ಸರಿಯಾಗಿ

ಮೋಟಾರ ಸೈಕಲ್ ನಡೆಸಲು ಬರುತ್ತಿರಲಿಲ್ಲ ಅಂದರೆ ಸರಿಯಲ್ಲ, ಆದರೂ ಸಹ ನನ್ನ ಗಂಡ ನನ್ನನ್ನು ಮತ್ತು ಮೂರು ವರ್ಷದ ಮೊಮ್ಮಗನನ್ನು ಹಿಂಬದಿ ಸವಾರನಾಗಿ ಕೂರಿಸಿಕೊಂಡು ನನ್ನ ಗಂಡನಿಗೆ ಮೋಟಾರ ಸೈಕಲ್ ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರ ಇರದೇ ಇದ್ದರೂ ಸಹ ತಾನು ಮೋಟಾರ ಸೈಕಲ್ ನಡೆಯಿಸಿಕೊಂಡು ಹೋಗುವಾಗ ಆಯತಪ್ಪಿ ಆತನೇ ಸ್ವತಃ ಮೋಟಾರ ಸೈಕಲನ್ನು ಬಿಳಿಸಿ ಅಪಘಾತಪಡಿಸಿರುತ್ತಾನೆ ಅಂದರೆ ಸರಿಯಲ್ಲ. ಅಪಘಾತವು ನನ್ನ ಗಂಡ ತಪ್ಪಿನಿಂದ ಆಗಿದ್ದರಿಂದ ನನ್ನ ಗಂಡನು ವಿಚಾರ ಮಾಡಿ ಎರಡು ದಿನಗಳ ಬಳಿಕ ಇನ್ನೊಂದು ಮೋಟಾರ ಸೈಕಲನ್ನು ಈ ಪ್ರಕರಣದಲ್ಲಿ ಸೇರಿಸಲು ನನ್ನ ಮಗ ಪಿರ್ಯಾದಿ ಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ. ನಾನು ನನ್ನ ಮುಖ್ಯ ಅರ್ಜಿಯಲ್ಲಿ ಹೇಳಿದಂತೆ ಎದುರುಗಡೆಯಿಂದ ಬರುತ್ತಿದ್ದ ಮೋಟಾರ ಸೈಕಲ್ ಸವಾರನ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

16) ಅಪಘಾತದಲ್ಲಿ ನನಗೆ ಆದಂತಹ ಗಾಯಗಳಿಂದ ನನ್ನ ಬಲಗಡೆ ಸೊಂಟದ ಭಾಗದ ಮೂಳೆ ಮುರಿತ ಆಗಿರುತ್ತದೆ ಮತ್ತು ನನ್ನ ಎಡಗೈ ಮುಂಗೈಗೆ ಮೂಳೆ ಮುರಿತ ಆಗಿರುತ್ತದೆ, ನಂತರ ನಾನು ಸಹ ಅಪಘಾತವಾದ ಮೊದಲಿಗೆ ಸವಣೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ನಂತರ ನನ್ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಅಲ್ಲಿನ ವೈದ್ಯರು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಅದೇ ದಿವಸ ಕಳುಹಿಸಿಕೊಟ್ಟಿದ್ದಾರೆ. ನಾನು ಕಿಮ್ಸ ಆಸ್ಪತ್ರೆಯಲ್ಲಿ ಎರಡು ತಿಂಗಳಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ.

17) ಅಪಘಾತದಲ್ಲಿ ನನ್ನ ಮೂಳೆ ಮುರಿತದ ಕುರಿತಾಗಿ ಸವಣೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಯಾವುದೇ ಎಕ್ಸರೇ ತೆಗೆದಿರುವದಿಲ್ಲ, ಆದರೆ ಕಿಮ್ಸ ಆಸ್ಪತ್ರೆಯಲ್ಲಿ ತೆಗೆದಿರುತ್ತಾರೆ. ಕಿಮ್ಸ ಆಸ್ಪತ್ರೆಗೆ ತೆಗೆದಿರುವಂತಹ ಎಕ್ಸರೆ ಪಿಲಂಗಳನ್ನು ಈ ಪ್ರಕರಣದಲ್ಲಿ

ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಆದಂತಹ ಅಪಘಾತದಲ್ಲಿ ನನಗೆ ಸಾದಾ ಸ್ವರೂಪದ ಗಾಯಗಳು ಆಗಿರುತ್ತವೆ ಅಂದರೆ ಸರಿಯಲ್ಲ. ಆ ಕಾರಣದಿಂದ ನನಗೆ ಈ ಪ್ರಕರಣದಲ್ಲಿ ಹೇಳಿದಂತಹ ಅಪಘಾತದಲ್ಲಿ ಸಾದಾ ಸ್ವರೂಪದ ಗಾಯಗಳು ಆಗಿದ್ದರಿಂದ ಕಿಮ್ಸ ಆಸ್ಪತ್ರೆಯಲ್ಲಿ ತೆಗೆದಂತಹ ಎಕ್ಸರೇ ಪಿಲಂಗಳನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಅಪಘಾತದ ನಂತರ ನಾನೇ ಸ್ವತಃ ಪೊಲೀಸರಿಗೆ ಅಪಘಾತವಾದ ಸ್ಥಳವನ್ನು ತೋರಿಸಿದಾಗ ಪೊಲೀಸರು ನನ್ನ ಸಮಕ್ಷಮ ಅಪಘಾತವಾದ ಸ್ಥಳದ ಪಂಚನಾಮೆ ಬರೆದಿರುತ್ತಾರೆ ಅಂದರೆ ಸರಿ. ನಾನು ಈ ಪ್ರಕರಣದಲ್ಲಿ ಪೊಲೀಸರಿಗೆ ಅಪಘಾತವಾದಂತಹ ಸ್ಥಳವನ್ನು ತೋರಿಸಿರುವದಿಲ್ಲ ಮತ್ತು ನಾನು ತೋರಿಸಿದ ಸ್ಥಳದಲ್ಲಿ ಘಟನಾ ಸ್ಥಳದಲ್ಲಿ ಪಂಚನಾಮೆ ಬರೆದಿರುತ್ತಾರೆ, ಈ ಎಲ್ಲ ವಿಷಯ ಗೊತ್ತಿದ್ದರೂ ಕಿಮ್ಸ ಆಸ್ಪತ್ರೆಯಲ್ಲಿ ಎಕ್ಸರೇ ಪಿಲಂಗಳನ್ನು ತೆಗೆದಿರುವದಿಲ್ಲ, ಸದರಿ ಎಕ್ಸರೇ ಪಿಲಂಗಳನ್ನು ಹಾಜರುಪಡಿಸಿದರೆ ನನಗೆ ಮೂಳೆ ಮುರಿತದ ಗಾಯ ಕಂಡು ಬರುತ್ತದೆ ಎಂದು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಅಪಘಾತದಲ್ಲಿ ಅದಂತಹ ಗಾಯಗಳಲ್ಲಿ ನನ್ನ ಮೂಳೆ ಮುರಿತ ಆಗದೇ ಇರುವದರಿಂದ ಸದರಿ ಸವಣೂರಿನ ಆಸ್ಪತ್ರೆಯಲ್ಲಿ ಯಾವುದೇ ಎಕ್ಸರೇ ತೆಗೆದಿಲ್ಲ ಅಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹೇಳಿದಂತಹ ಅಪಘಾತದಲ್ಲಿ ಕೇವಲ ಸಾದಾ ಸ್ವರೂಪದ ಗಾಯಗಳು ಆಗಿದ್ದು, ತೀವ್ರ ಸ್ವರೂಪದ ಗಾಯಗಳು ಯಾವುದೇ ಮೂಳೆ ಮುರಿತದ ಗಾಯಗಳು ಆಗಿರುವದಿಲ್ಲ, ಆದರೂ ಸಹ ನಾನು ಸುಳ್ಳು ನಿ.ಪಿ-7 ರಿಂದ 10 ಅಂಗನ್ಯೂನತೆ ಪ್ರಮಾಣ ಪತ್ರ ಪಡೆದು ಮತ್ತು ಸುಳ್ಳು ವೈದ್ಯಕೀಯ ದಾಖಲಾತಿಗಳನ್ನು ಸೃಷ್ಟಿಸಿ ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ. ಪ್ರಕರಣದಲ್ಲಿ ಹೇಳಿದಂತಹ ಅಪಘಾತವು ಸಂಪೂರ್ಣ ನನ್ನ

ಗಂಡನ ತಪ್ಪಿನಿಂದ ಆಗಿದ್ದರಿಂದ 2 ನೇ ಎದುರುದಾರ ವಿಮಾ ಕಂಪನಿಯವರು ನನಗೆ ಪರಿಹಾರ ಕೊಡಲು ಬಾಧ್ಯಸ್ಥರು ಆಗುವದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ,ಹಾವೇರಿ.